# 'ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್'

**ವಿಜ್ಞಾನ ಮಾದರಿಗೆ ತಕ್ಕದಾದ ಮಾದರಿ ಟಿಪ್ಪಣಿ ಸಿದ್ಧಪಡಿಸಿಕೊಂಡ ನಿಂತಿದ್ದ ಯುವ ವಿಜ್ಞಾನಿಗಳ ಪಡೆಯು, ಮಾದರಿಗಳ ವೀಕ್ಷಣೆಗೆ ಬರುವ ಪ್ರತಿಯೊಬ್ಬರಿಗೂ ಥಟ್ ಎಂದು ಚುಟುಕಾಗಿ ವಿವರಣೆ ನೀಡುವ ಶೈಲಿ ನೋಡುಗರನ್ನು ಆಕರ್ಷಣೆ ಮಾಡಿತು. ಟ್ಯಾಲೆಂಟ್ ಹಂಟ್ ಸಾರ್ಥಕ ಕ್ಷಣಗಳಿಗೆ ಯುವ ವಿಜ್ಞಾನಿಗಳು ಸಾಕ್ಷಿಯಾದರು.**



• ಮಹೇಶ ಎಸ್. ಕನ್ನೇಶ್ವರ

'ಬಿ ವಿಥ್ ಎಂಜಿನಿಯರಿಂಗ್' ಇಂತಹ ದೊಂದು ಟ್ಯಾಗ್‌ಲೈನ್ ಇಟ್ಟುಕೊಂಡು ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ 'ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್ - ಎಸ್‌ಎಸ್‌ಟಿಎಚ್ ಸ್ಟಾರ್ಟ್ ಅಪ್ ಇಂಡಿಯಾ' ಮಿಷನ್ ಹಬ್ಬದ ವಾತಾವರಣ ನಿರ್ಮಿಸಿತ್ತು. ಕಣ್ಣು ಹಾಯಿಸಿದಷ್ಟು ವಿಜ್ಞಾನ ಮಾದರಿಗಳು ನೋಡುಗರನ್ನು ತಮ್ಮತ್ತ ಕೈಬೀಸಿ ಕರೆದವು. ವಿಜ್ಞಾನದ ಕಡೆಗೆ ಯುವ ವಿದ್ಯಾರ್ಥಿಗಳನ್ನು ಸೆಳೆಯುವ ಸಲುವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉದಯೋನ್ಮುಖ ವಿಜ್ಞಾನಿಗಳ ಕರಗಳಿಂದ ಅರಳಿದ್ದ ಸಾವಿರಾರು ಸಂಖ್ಯೆ ವಿಜ್ಞಾನ ಮಾದರಿಗಳನ್ನು ಕಣ್ಣನ ಸೆಳೆದವು.

ಸಹ್ಯಾದ್ರಿ ಕಾಲೇಜು ಪ್ರವೇಶ ಮಾಡುತ್ತಿದ್ದಂತೆ ಎಲ್ಲರನ್ನೂ ಸ್ವಾಗತಿಸಲು ಎಂಜಿನಿಯರಿಂಗ್ ಮಾದರಿಗಳ ಬಗ್ಗೆ ವಿವರಣಾತ್ಮಕ ಮಾಹಿತಿ ಸಿದ್ಧಪಡಿಸಿಕೊಂಡು ನಿಂತಿದ್ದ ವಿದ್ಯಾರ್ಥಿಗಳ ಮಾತುಗಾರಿಗೆ ಕೆಲರವನ್ನು ಮೂಖ ವಿಸ್ಮಿತಗೊಳಿಸಿತು. ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಮ್ಯಾನೇಜ್ಮೆಂಟ್ , ಪಿಯುಸಿ ಹಾಗೂ ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿಯೇ ಈಚೆಗೆ ಅಡ್ಯಾರ್ ಸಹ್ಯಾದ್ರಿ ಕಾಲೇಜು ಆವರಣದಲ್ಲಿ ಏರ್ಪಡಿಸಿದ್ದ ಎರಡು ದಿನಗಳ ಟ್ಯಾಲೆಂಟ್ ಹಂಟ್ ಸಾರ್ಥಕ ರೂಪ ಪಡೆದುಕೊಂಡಿದೆ.

ಟ್ಯಾಲೆಂಟ್ ಹಂಟ್ ಸಮುದಾಯ ಆಧಾರಿತ ವಿವಿಧ ಸಮಸ್ಯೆಗಳ ಹೊತ್ತ ಹಾಗೂ ವಿನ್ಯಾಸ ಚಿಂತನೆ ವಿಜ್ಞಾನ ಮಾದರಿ ಮೇಳ. ಇದಕ್ಕಾಗಿಯೇ 200 ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರಗಳನ್ನು ಹಮ್ಮಿಕೊಂಡು, 1200 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ 350 ಕ್ಕೂ ಹೆಚ್ಚು ವಿಜ್ಞಾನ ಮಾದರಿಗಳನ್ನು ಪ್ರದರ್ಶನದಲ್ಲಿ ಇಡಲಾಗಿತ್ತು. 40 ಮಾದರಿಗಳನ್ನು ಉತ್ಪನ್ನಗಳಾಗಿ ಪರಿವರ್ತಿಸಿ ಸ್ಟಾರ್ಟ್ ಅಪ್ ಆಗಿ ಮಾಡುವುದಕ್ಕೆ ಪ್ರದರ್ಶನದಲ್ಲಿ ಆಯ್ಕೆ ಮಾಡಲಾಗಿದೆ.

ದೀರ್ಘಕಾಲದ ಆವಿಷ್ಕಾರಕ್ಕೆ ಸಮಯ ವ್ಯರ್ಥ ಮಾಡುವ ಬದಲಿಗೆ,ಕಡಿಮೆ ಸಮಯದಲ್ಲಿ ಅವಿಷ್ಕಾರಗಳನ್ನು ಮಾಡಿ ಹೂಡಿಕೆ ಮಾಡೋಣ ಎಂಬ ಪರಿಕಲ್ಪನೆ ದಾಳದಿಂದ ಹುಟ್ಟಿಕೊಂಡಿರುವ 'ಟ್ಯಾಲೆಂಟ್ ಹಂಟ್' ಎಸ್‌ಎಸ್‌ಟಿಎಚ್ ನಾಮ ಬಲದಿಂದ ಗಟ್ಟಿಯಾಗಿ 6 ನೇ ಅವೃತ್ತಿ ಕಂಡಿದೆ. ಕರಾವಳಿ ಭಾಗದಲ್ಲಿ ನಾವಿನ್ಯತೆ ಮತ್ತು ಉದ್ಯಮಶೀಲತೆ ಉತ್ತೇಜಿಸುವ ಸಲುವಾಗಿ ಶುರು ಮಾಡಲಾಗಿರುವ ಈ ಕಾರ್ಯಕ್ರಮವು ಇವತ್ತು ಸಾವಿರಾರು ಸಂಖ್ಯೆಯ ಉದಯೋನ್ಮುಖ ವಿಜ್ಞಾನಿಗಳ ಸಾಕ್ಷಿ ಆಯಿತು. ಸಾಮಾಜಿಕ ಆವಿಷ್ಕಾರ ಪ್ರೇರೇಪಿಸುವ, ಮಾರ್ಗದರ್ಶನ ಮಾಡುವ ಮತ್ತು ಅವುಗಳನ್ನು ಪೋಷಿಸುವ ಮೂಲಕ ಸಮುದಾಯ ಆಧಾರಿತ ಸಮಸ್ಯೆ ಪರಿಹಾರಕ್ಕೆ ಉತ್ತಮ ವೇದಿಕೆ ಆಗಿದ್ದು, ಸದುಪಯೋಗ ಪಡೆದ ಯುವ ವಿಜ್ಞಾನಿಗಳು ಶಕ್ತಿಮೀರಿ ವಿಜ್ಞಾನ ಮಾದರಿಗಳಿಗೆ ಜೀವ ತುಂಬಿದ್ದು ಪ್ರದರ್ಶನದಲ್ಲಿ ಕಂಡು ಬಂತು.



## 'ವಿಜ್ಞಾನ ಮಾದರಿ ವೇದಿಕೆ'

ಇದೊಂದು ಉತ್ತಮ ಕಾರ್ಯಕ್ರಮ. ವಿದ್ಯಾರ್ಥಿಗಳಲ್ಲಿ ಕಲಿಕಾ ಹಂತದಲ್ಲಿ ವಿಜ್ಞಾನ ಸಂಶೋಧನೆಗಳ ಬಗ್ಗೆ ಮಾಹಿತಿ ನೀಡಬಲ್ಲ ಉಪಯುಕ್ತ ಕಾರ್ಯಕ್ರಮ. ವಿದ್ಯಾರ್ಥಿಗಳ ಪ್ರತಿಭೆಗೆ ಉತ್ತಮ ವೇದಿಕೆ ನಿರ್ಮಾಣ ಆಗಿದೆ. ವಿಜ್ಞಾನ ಮಾದರಿಗಳು ನಿಜಕ್ಕೂ ನಮ್ಮಲ್ಲಿ ಪುಳಕ ಉಂಟು ಮಾಡಿವೆಎಂದು ಥಿಂಕ್‌ಸ್ಟ್ರೀಟ್ ಟೆಕ್ನಾಲಜಿಸ್ ಸಹ-ಸಂಸ್ಥಾಪಕ ನಿರ್ದೇಶಕ ಉದಯ್ ಬಿರ್ಜೆ ಹೇಳಿದರು.

## 'ಪ್ರೋತ್ಸಾಹ ತುಂಬುವ ಕೆಲಸ'

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಆರು ವರ್ಷಗಳಿಂದ ಇಂತಹ ವಿನೂತನ ವಿಜ್ಞಾನ ಮಾದರಿ ಪ್ರದರ್ಶನದ ಟ್ಯಾಲೆಂಟ್ ಹಂಟ್ ಕಾರ್ಯಕ್ರಮ ಆಯೋಜನೆ ಮಾಡುತ್ತಾ ಬರುತ್ತಿದೆ. ಪ್ರತಿ ವರ್ಷವೂ ಟ್ಯಾಲೆಂಟ್ ಹಂಟ್ ಪ್ರತಿಭಾನ್ವೇಷಣಾ ಸ್ಪರ್ಧೆ ಹಾಗೂ ವಿಜ್ಞಾನ ಮಾದರಿ ಪ್ರದರ್ಶನ ನಡೆಸಲಾಗುತ್ತಿದೆ. ವರ್ಷದಿಂದ ವರ್ಷಕ್ಕೆ ಜನಪ್ರಿಯತೆ ಕಾಣುತ್ತಿದ್ದು, ಯುವ ಮನಸ್ಸಿನಲ್ಲಿ ಮಿಡಿತಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಅವುಗಳಿಗೆ ಜೀವ ತುಂಬುವ ಕೆಲಸ ಮಾಡಲಾಗುತ್ತಿದೆ ಎಂದು ಸಹ್ಯಾದ್ರಿ ಕಾಲೇಜು ಸ್ಥಾಪಕ ಅಧ್ಯಕ್ಷ ಡಾ. ಮಂಜುನಾಥ ಭಂಡಾರಿ ಹೇಳಿದರು.

ವಿಜ್ಞಾನದ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸುವ ಫಲಕ ವಿಜ್ಞಾನಿಗಳು ನೀಡಿದ ಉಪನ್ಯಾಸ, ಮೂಲ ವಿಜ್ಞಾನ ಮತ್ತು ಅನ್ವಯ- ಆಧಾರಿತ ಮಾದರಿ.

ಹೊಸ ಪರಿಕಲ್ಪನೆಗಳ ಕೊಡುಗೆ, ವೈಯಕ್ತಿಕ ಸಂಪರ್ಕ ಪ್ರೋತ್ಸಾಹಿಸುವುದು, ವೈಜ್ಞಾನಿಕ ಚಟುವಟಿಕೆ ಪ್ರೇರೇಪಿಸುತ್ತದೆ ಮತ್ತು ವೈಜ್ಞಾನಿಕ ಪ್ರಶ್ನೆ, ವಿಭಿನ್ನ ದೃಷ್ಟಿಕೋನದ ಸಂವಾದ, ವಿಮರ್ಶಾತ್ಮಕ ಪರೀಕ್ಷೆಗೆ ಅನುವು ಮಾಡಿಕೊಡುವುದು, ಕಲಿಕೆಗೆ ಮುಕ್ತ ವೇದಿಕೆ, ಔಪಚಾರಿಕ ಮತ್ತು ಅನೌಪಚಾರಿಕ ಸಂವಾದ, ಸೃಷ್ಟಿಸಲು ನಡೆಯುತ್ತವೆ, ಯುವ ಶಿಕ್ಷಣಕ್ಕೆ ಸಲಹೆ ನೀಡುವಿಕೆ ಮತ್ತು ವಿಜ್ಞಾನ ಶಿಕ್ಷಣದ ಕಡೆಗೆ ನಿರ್ದೇಶನ ನೀಡುವುದು, ಸಂವಹನ ಅವಧಿಗಳಲ್ಲಿ ಪ್ರಯೋಗಾಲಯ ಕೆಲಸ ಮತ್ತು ವೈಜ್ಞಾನಿಕ ಯೋಜನೆ ಪ್ರದರ್ಶನಗಳು ಈ ಟ್ಯಾಲೆಂಟ್ ಹಂಟ್ ಹಬ್ಬದಲ್ಲಿ ನಡೆದವು.